ಸ|| 1907—08ನೆ ಇಸವಿ ಮಿ|| ಅರ್ಜೀ ನಂಬರು 183.

ಬೆಂಗಳೂರು ಗವರ್ನಮೆಂಟು ಪ್ರೆಸ್‌ನಲ್ಲಿ ಕಂಪಾಜಿಟರು ಆಗಿ ಇದ್ದು ಮೃತಪಟ್ಟ ಎಲ್ಲಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ವೆಂಕಟಮ್ಮ, ಮೃತಪಟ್ಟ ಸದರೀ ಎಲ್ಲಪ್ಪನಿಗೆ ಖಾಸ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರಲ್ಲಿ ವಾಸಸ್ಥರಾಗಿ ಮೃತಪಟ್ಟ ಎಲ್ಲಪ್ಪನ ಜೆಂದಗಿ ಬಗ್ಯಾಗೆ ಬರತಕ್ಕ 100 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ಯನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟಮ್ಮನ ಅರ್ಜಿಯನ್ನು ಸ|| 1907ನೆ ಇಸವಿ ಸೆಪ್ಟಂಬರು ತಿಂಗಳು 13ನೆ ತಾರೀಖು ಶುಕ್ರವಾರದಲ್ಲೂ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿವರ್ಕೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಎಲ್ಲಪ್ಪನ ಆಸ್ತಿಗೆ ಹಕ್ಕು ದಾರರಾದ ವಿಶಿಷ್ಟರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ|| 1907ನೆ ಇಸವಿ ಆಗಸ್ಟು ತಿಂಗಳು 26ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1906—07ನೆ ಇಸವಿ ಮಿ|| ಅರ್ಜೀ ನಂಬರ್ 734.

ಪಾವಗಡ ತಾಲ್ಲೂಕು ಇರುಪಸಂದ್ರದಲ್ಲಿದ್ದು ಮೃತಪಟ್ಟ ಚಿತಂಬರಪ್ಪನ ಮಕ್ಕಳು

1ನೆ ಸಂಜೀವಯ್ಯ, 2ನೆ ವೆಂಕಟಪ್ಪ ಇವರುಗಳ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಪಾವಗಡ ತಾಲ್ಲೂಕು ಇರುಪಸಂದ್ರದಲ್ಲಿರುವ ವೈಶ್ಯರ ಕಾರುಬಾಕಲು ವೆಂಕಟರಾಗಪ್ಪನ ಮಗ ನಾರಣ್ಯೈಯ್ಯ, ಮೃತಪಟ್ಟ ಸದರೀ 1ನೆ ಸಂಜೀವಯ್ಯ, 2ನೆ ವೆಂಕಟ್ಟಪ್ಪ ಇವ್ವರಿಗೆ ದೊಡ್ಡ ತಂದೆಯ ಮಕ್ಕಳಾಗಬೇಕೆಂಬ ಹಕ್ಕುದಾರಿ ಮೇಲೆ ಇರುಪಸಂದ್ರ ಸ್ಥಳದ ನಾರಣ್ಯೈಯ್ಯ ಎಂಬುವರು ಡಿಟೋ ವಾಸಸ್ಥರಾಗಿ ಮೃತಪಟ್ಟ 1ನೆ ಸಂಜೀವಯ್ಯ 2ನೆ ವೆಂಕಟಪ್ಪ ಇವರುಗಳ ಜೆಂದಗಿ ಬಗ್ಯಾಗಿ ಬರತಕ್ಕ 675 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ಯನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ನಾರಣ್ಯೈಯ್ಯನವರ ಅರ್ಜಿಯನ್ನು ಸ|| 1907ನೆ ಇಸವಿ ಸೆಪ್ಟಂಬರು ತಿಂಗಳು 6ನೆ ತಾರೀಖು ಶುಕ್ರವಾರ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿವರ್ಕೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ 1ನೆ ಸಂಜೀವಯ್ಯ 2ನೆ ವೆಂಕಟಪ್ಪ ಇವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ|| 1907ನೆ ಇಸವಿ ಆಗಸ್ಟು ತಿಂಗಳು 12ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ|| 1906—07ನೆ ಇಸವಿ ಮಿ|| ಅರ್ಜೀ ನಂಬರ್ 735.

ಶಿವಮೊಗ್ಗಾ ನಾರಮಲ್ ಸ್ಕೂಲ್ ಮ್ಯಾಸ್ಟರ್ ಆಗಿದ್ದು, ಮೃತಪಟ್ಟ ಮೌಲ್ವಿ ಮಿರ್ಜಾಹಸ್ರ್ಬೇಗ್ ಸಾಬರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೆ ಕುಲುಸುಂಬಿ, 2ನೆ ಅಹಮದ್‌ಬೇಗ್‌ಸಾಬ್ ಮೃತಪಟ್ಟ ಸದರೀ ಮೌಲ್ವಿ ಮಿರ್ಜಾಹಸ್ರ್ಬೇಗ್ ಸಾಬರಿಗೆ ಕುಲುಸುಂಬಿ ಹೆಂಡತಿಯಾಗಬೇಕೆಂದೂ, ಅಹಮದ್‌ಬೇಗ್ ಸಾಬರು ಮಲತಾಯಿ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ನಾಲಬಂದುಪೇಟೆ ಸ್ಥಳದ 1ನೆ ಕುಲುಸುಂಬಿ, 2ನೆ ಅಹಮದ್‌ಬೇಗ್ ಸಾಬರು ಡಿಟೋ ವಾಸಸ್ಥರಾಗಿ ಮೃತಪಟ್ಟ ಮೌಲ್ವಿ ಮಿರ್ಜಾಹಸ್ರ್ಬೇಗ್ ಸಾಬರ ಜೆಂದಗಿ ಬಗ್ಯಾಗಿ ಬರತಕ್ಕ 697 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ಯನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡುತ್ತಾರೆ.

ಸದರಿ ದರಖಾಸ್ತುದಾರರಾದ 1ನೆ ಕುಲುಸುಂಬಿ, 2ನೆ ಅಹಮದ್‌ಬೇಗ್ ಸಾಬರ ಅರ್ಜಿಯನ್ನು ಸ|| 1907ನೆ ಇಸವಿ ಸೆಪ್ಟಂಬರ್ ತಿಂಗಳು 6ನೆ ತಾರೀಖು ಶುಕ್ರವಾರ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿವರ್ಕೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮೌಲ್ವಿ ಮಿರ್ಜಾಹಸ್ರ್ಬೇಗ್ ಸಾಬರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ|| 1907ನೆ ಇಸವಿ ಆಗಸ್ಟು ತಿಂಗಳು 12ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಜೆ. ಹೆಚ್. ಭಾಭಾ,
ಸಬಾರ್ಡಿನೇಟ್ ಜಡ್ಜ್.

ಬೆಂಗಳೂರು ಅಡಿಷನಲ್ ಮ್ಯುನಿಸೀಫ್ ಕೋರ್ಟ್‌ನಲ್ಲಿ.

ತಾರೀಖು 19ನೆ ಆಗಸ್ಟು 1907.

Original Suit No. 788 of 1906-07.

ವಾದಿ.	ಪ್ರತಿವಾದಿಗಳು.
ಕಾರ್ಕಾಹಳ್ಳಿ ತಾಲ್ಲೂಕು ಮಾಳಿ ಮಠದ ಚರಮೂ ತಿಗಳುವೆ ಸೋಮಪ್ಪದೇವರು.	ಕೋಲಿಸಂಟೆ ತಾಲೂಕು ಜಿಡದೀಲಿರುವರು— 1ನೆ ತಿನಾಚಾರದ ಹುಚ್ಚಪ್ಪ ದೇವರು, 2ನೆ ಅಪ್ಪಾಜಣ್ಣನವರ ಮಕ್ಕಳು ರುದ್ರಪ್ಪಾಜಿ ಅರಸರು, 3ನೆ ಕಾಳಪ್ಪನವರ ಮಕ್ಕಳು ಶಿವರುದ್ರಪ್ಪಾಜಿ ಅರಸರು, 4ನೆ ಶಿದ್ದಯ್ಯನವರ ಮಕ್ಕಳು ಶಿವಯ್ಯ.

ಮೇಲ್ಕಂಡ ಮೊಕದ್ದಮೆಯಲ್ಲಿ ಪ್ರತಿವಾದಿಗಳ ಮೇಲೆ ಈ ನಂಬರು ವಾರೆಯು ಇರರಿಂದ ಪೆಡ್ಯೂಲಿನಲ್ಲಿ ಕಂಡ ಜವುಕಿ ಮತ್ತು ಅದಕ್ಕೆ ಸಂಬಂಧಪಟ್ಟ ಜವಿನಿನ ವಿಷಯದಲ್ಲಿ ಮೇಲೆ ಮೇದ ಚರಂತಿ ಸ್ವಾಮಿಯವರು ತಾನು ಸ್ವಾಧೀನಾನುಭವದಲ್ಲಿರಲು

ಹಕ್ಕುದಾರನೆಂದೂ ಸದರಿ ಸ್ವತ್ತುಗಳನ್ನು ಪ್ರತಿವಾದಿಗಳಿಂದ ತನ್ನ ಸ್ವಾಧೀನಕ್ಕೆ ಕೊಡಿಸಬೇಕೆಂದೂ ಈ ಕೋರ್ಟಿನಲ್ಲಿ ದಾವಾ ತಂದಿರುವದರಿಂದ ಚಳ್ಳಕೆರೆ ಮಠದ ಶಿಷ್ಯರುಗಳ ಪೈಕಿ ಈ ದಾವಾದಲ್ಲಿ ಕಕ್ಷಿಗಾರರಾಗಿ ಕೇರಬೇಕೆಂಬ ಇಷ್ಟವುಳ್ಳವರು 1907ನೆ ಇಸವಿ ಸೆಪ್ಟೆಂಬರ್ 5ನೆ ತಾರೀಖು ದಿವಾ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಮುರೂಮು ಹಾಜರಾಗಲು ಇದರಿಂದ ಸಮಸ್ತ ಜನರಿಗೆ ತಿಳಿಯಪಡಿಸಲ್ಪಟ್ಟಿದೆ.

ಡಿ. ಕೆ. ರಾಮರಾವ್,
ಅಡೀಷನಲ್ ಮ್ಯಾಜಿಸ್ಟ್ರೇಟ್.

ಹಡ್ಯೋಲೆ.

ಕೊಣನೂರು ತಾಲ್ಲೂಕು ಬಿಡದೀಲಿರುವ ಸರ್ವೆ 43ನೆ ಸಬ್ 2ನೆ ನಂಬರು ಜಮೀನಿಗೆ ಚಕ್ಕುಬಂದಿ. ಪೂರ್ವಕ್ಕೆ ಅಂಜೆ ಹಾಮಯ್ಯನ ಹೊಲ. ಪಶ್ಚಿಮಕ್ಕೆ ಖಾಸಂಸಾಬರ ಹೊಲ. ಉತ್ತರಕ್ಕೆ ವನ್ನೆಕೆಟ್ಟರ ಇನಾಂತಿ ಹೊಲ. ದಕ್ಷಿಣಕ್ಕೆ ವಲ್ಲೀಶಪ್ಪನವರ ತೆಂಗಿನ ತೋಟ ಮತ್ತು ರಸೂಲ್‌ಮಿಯಾಸಾಬ್ರ ತೋಟ. ಈ ಮಧ್ಯೆ ಇರುವ ಹೊಲ, ತೋಟ ಮತ್ತು ಇತರ ಸಹಾ ಬೀಜವು 6 ಎಕರೆ 5 ಗುಂಟೆ. ಆಕಾರ 8-8-1.

ಡಿ. ಕೆ. ರಾಮರಾವ್,
ಅಡಿಷನಲ್ ಮ್ಯಾಜಿಸ್ಟ್ರೇಟ್.

ಮೈಸೂರ ಗೆಜೆಟ್ ಚಂದಾದಾರರ ವಗ್ಗೈರೆ.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತ, ಮತ್ತು ಸದರೀ ಗೆಜೆಟ್ಟನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ಹವಾಲು ನೋಟಿಸು ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪ್ಯೆಲರವರ ಹೆಸರಿಗೆ ನಿಳಾಸ ಬರೆಯಿಸಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.	ಟಪ್ಪಾಲ್ ಹಾಸಲ್ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ
	ರೂ. ಆ.	ರೂ. ಆ.
ಇಂಗ್ಲಿಷ್ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 6	1 12
ಇಂಗ್ಲಿಷ್ ಮತ್ತು ಕನ್ನಡ ಸುದಾ 12 ತಿಂಗಳಿಗೆ	7 0	3 8
ಜಸ್ಟ್ ಮಾಹೇ ಯಾ ಕ್ವಾರ್ಟರ್‌ಗೆ		

ದಾವಾಖಾಯಿ ಪ್ರಕಾರ ದರಗಳ್ಳು

	ರೂ. ಆ.
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ ರೆಗ್ಯುಲೇಷ್ಯ ಯಾ ಆಕ್ಟ್‌ಗಳು ಯಾವದೂ ಇಲ್ಲದಿದ್ದರೆ.	0 8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜ್ ಕೇಳಿ ತಿಳಿದುಕೊಳ್ಳಬಹುದು.

1891ನೆ ಇಸವಿ ಜುಲೈ 2ನೆ ಮತ್ತು 1655ನೆ ನಂಬರ್ ಉಳ್ಳ ಗವರ್ನಮೆಂಟ್ ಇಸ್ತಿಹಾರ್‌ನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಸೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭವಿಕೆ ಕೆಲಸ ನೋಡುತಲಿದಾರೆಂಬದಾಗಿ ಆಯಾ ತಾಲ್ಲೂಕು ಅಮಲ್‌ದಾರರಿಂದ ಬಂದು ಸರಟಿಫಿಕೇಟನ್ನು ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೆ ಇಸವಿ ಜೂನ್ 21ನೆ ಮತ್ತು 24205—6—ಜೆ. 6200ನೆ ನಂಬರ್ ಗವರ್ನಮೆಂಟ್ ಆರ್ಡರ್ ಅನುಸರಿಸಿ ಮೇಲಂಡ ರಿಯಾಯಿತಿ ದರವು, ನಾಡ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತೆ.

ಸಿವಿಲ್ ಕೋರ್ಟ್‌ನಿಂದ ಕೊಡಲ್ಪಡುವ 1901ನೆ ಇಸವಿ VIIನೆ ರೆಗ್ಯುಲೇಷ್ಯ ಅನುಸರಿಸಿ ಸರ್ಟಿಫಿಕೇಟ್

ಬಗ್ಗೆ ನೋಟಿಸುಗಳು :—	ರೂ. ಆ.
ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಗೆ ಇಂಗ್ಲೀಷು ಅಥವಾ ಕನ್ನಡ	2 8
ಎರಡನೇ ಸಲ ವ ಆತರುವಾಯ ಪ್ರತಿ ಆವರ್ತಿಗೂ ಡಿಟೋ	1 4

ಸಿವಿಲ್ ಪ್ರೊಸೀಜ್ಯೂರ್ ಕೋಡಿನ 317ನೆ ಸೆಕ್ಷನ್ ಅನುಸರಿಸಿ ದಿವಾಳಿ ಅಪ್ಲಿಕೇಷನ್‌ಗಳ ಬಗ್ಗೆ ನೋಟಿಸುಗಳಿಗೆ :—

ಮೊದಲನೇ ಸಲಕ್ಕೆ	5 0
ಎರಡನೇ ವ ಆತರುವಾಯ ಪ್ರತಿ ದಫಾಕ್ಕೆ	2 8

ಸಿವಿಲ್ ಪ್ರೊಸೀಜ್ಯೂರ್ ಕೋಡಿನ 354ನೆ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.

ಡ್ಯೂಪ್ಲಿಕೇಟ್ ಕಾಪೀ ಪಟ್ಟೆ ವಗ್ಗೈರೆ ಕೊಡುವ ಬಗ್ಗೆ ರೆವಿನ್ಯೂ ಆಫಿಸರಗಳು ಕೊಡುವ ನೋಟಿಸುಗಳಿಗೆ :—

ಮೊದಲನೇ ಸಲಕ್ಕೆ	ಪುಟ 1ಕ್ಕೆ	10 0
ಎರಡನೇ ಸಲ ವ ಆತರುವಾಯ ಪ್ರತಿ ಸಲಕ್ಕೂ	,,	5 0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ :—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಙ್ತಿ 1ಕ್ಕೆ	0 8
ಎರಡನೇ ದಫಾ	ಡಿಟೋ	ಡಿಟೋ 0 6
ಮೂರನೇ ವ ಆತರುವಾಯ ಪ್ರತಿ ಸಲಕ್ಕೆ		0 4